

# ಶಿಂಗಲ್ಸ್

## ಚಿಕನ್‌ಪಾಕ್ಸ್ ಸೋದರ!

ಶಿಂಗಲ್ಸ್ ಎಂದರೆ ಹರ್ಪಿಸ್ ಜೋಸ್ಟರ್ ಅಥವಾ ಜೋನಾ ಎಂದು ಕರೆಯಲಾಗುವ ಒಂದು ರೀತಿಯ ವೈರಸ್ ಕಾಯಿಲೆ. ಇದು ಚರ್ಮದ ಮೇಲೆ ಗುಳ್ಳೆ ಹಾಗೂ ನೋವಿನಿಂದ ಕೂಡಿರುವ ದದ್ದು ಆಗಿದ್ದು, ಚಿಕನ್‌ಪಾಕ್ಸ್‌ನ ಮತ್ತೊಂದು ರೂಪವೂ ಹೌದು.

■ ಉಮಾ ಅನಂತ್

ಅರವತ್ತರ ಹರೆಯದ ಬೆಂಗಳೂರಿನ ವಿಶ್ವನಾಥರಿಗೆ ಸರ್ಕಾರಿ ನೌಕರಿಯಿಂದ ನಿವೃತ್ತರಾದ ಬಗ್ಗೆ ನೆಮ್ಮದಿ ಜೊತೆಗೆ ಸಂಭ್ರಮ. ಮನೆಮಂದಿಯೆಲ್ಲ ಸೇರಿ ಔತಣಕೂಟ ಏರ್ಪಡಿಸಿ ಕೆಲದಿನಗಳಷ್ಟೇ ಕಳೆದಿವೆ. ವಿಶ್ವನಾಥರ ಬಲಕೈ ನರದಲ್ಲಿ ಅಸಾಧ್ಯ ಉರಿ, ಸೆಳೆತ ಅಷ್ಟೇ ಅಲ್ಲ ಕೆಂಪು ಬಣ್ಣದ ಗುಳ್ಳೆಗಳು. ಇದರಿಂದ ರಾತ್ರಿಯೆಲ್ಲ ನಿದ್ದೆಯೇ ಇಲ್ಲ. ವೈದ್ಯರ ಬಳಿ ತೋರಿಸಿದಾಗ ಇದು ಶಿಂಗಲ್ಸ್ ಎಂದೂ, ಚಿಕ್ಕಂದಿನಲ್ಲಿ ಚಿಕನ್‌ಪಾಕ್ಸ್ ಬಂದು ಗುಣಮುಖನಾದರೂ ಅದರ ವೈರಸ್ ದೇಹದೊಳಗೆ ಮನೆಮಾಡಿಕೊಂಡು ಈಗ ಹರ್ಪಿಸ್ ಮಾದರಿಯಲ್ಲಿ ಕಾಡುತ್ತಿರುವುದು ಎಂಬುದು ಪತ್ತೆಯಾಯಿತು. ವೈದ್ಯರ ಮಾರ್ಗದರ್ಶನದ ಮೇರೆಗೆ ಔಷಧಿ ಸೇವಿಸಿ, ಅಗತ್ಯ ಪಥ್ಯವನ್ನೂ ಮಾಡಿಕೊಂಡು ಬರುತ್ತಿರುವ ವಿಶ್ವನಾಥ್ ನಿಧಾನಕ್ಕೆ ಸುಧಾರಿಸಿಕೊಳ್ಳುತ್ತಿದ್ದಾರೆ.

ಶಿಂಗಲ್ಸ್ ಎಂದರೆ ಹರ್ಪಿಸ್ ಜೋಸ್ಟರ್ ಅಥವಾ ಜೋನಾ ಎಂದು ಕರೆಯಲಾಗುವ ಒಂದು ರೀತಿಯ ವೈರಸ್ ಕಾಯಿಲೆ. ಇದು ಚರ್ಮದ ಮೇಲೆ ಗುಳ್ಳೆ ಹಾಗೂ ನೋವಿನಿಂದ ಕೂಡಿರುವ ದದ್ದು. ದೇಹದ ಎಡ ಅಥವಾ ಬಲಭಾಗಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಕೆಲ ಸಂದರ್ಭದಲ್ಲಿ ಮುಖದ ಮೇಲೆಯೂ ಕಾಣಿಸಿಕೊಳ್ಳಬಹುದು. ದದ್ದು ಕಾಣಿಸಿಕೊಳ್ಳುವ ನಾಲ್ಕು ದಿನ ಮೊದಲು ಆ ಜಾಗದಲ್ಲಿ ನೋವು ಅಥವಾ ಜುಮ್ಮೆನಿಸುವ ಲಕ್ಷಣಗಳೂ ಗೋಚರಿಸುವ ಸಾಧ್ಯತೆ ಇದೆ. ಅಲ್ಲದೆ ಜ್ವರ, ತಲೆನೋವು, ಆಯಾಸ ಕಾಣಿಸಿಕೊಂಡ ತಿಂಗಳ ಬಳಿಕ ಶಿಂಗಲ್ಸ್ ಎಂಬ ದದ್ದು ಕಾಣಿಸಿಕೊಳ್ಳುತ್ತದೆ. ದದ್ದು ಗುಣವಾದರೂ ನರಗಳಲ್ಲಿ ನೋವು ಇರುತ್ತದೆ. ಇದನ್ನು 'ಪೋಸ್ಟ್ ಹರ್ಪಿಟಿಕ್ ನರಶೂಲೆ' ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ರೋಗ ನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಈ ಸಮಸ್ಯೆ ಅಧಿಕ.

ಚಿಕನ್‌ಪಾಕ್ಸ್‌ಗೆ ಕಾರಣವಾಗುವ ವೆರಿಸೆಲ್ಲಾ ಜೋಸ್ಟರ್ ವೈರಸ್ (VZV)ನಿಂದ ಶಿಂಗಲ್ಸ್ ಉಂಟಾಗುತ್ತದೆ. ಇದನ್ನು ವರಿಸೆಲ್ಲಾ ಎಂದೂ ಕರೆಯುತ್ತಾರೆ, ವೈರಸ್‌ನೊಂದಿಗಿನ ಆರಂಭಿಕ ಸೋಂಕು, ವ್ಯಕ್ತಿಯ ಬಾಲ್ಯ ಅಥವಾ ಹದಿಹರೆಯದಲ್ಲಿಯೇ ತಗುಲಿರುತ್ತದೆ. ಈ ವೈರಸ್ ರೋಗಿಯ ದೇಹದಲ್ಲಿ ದಶಕಗಳವರೆಗೂ ಸುಪ್ತವಾಗಿರುತ್ತದೆ. ನಂತರ ಅದು ಸಕ್ರಿಯಗೊಂಡು ನರಗಳಿರುವ ದೇಹದುದ್ದಕ್ಕೂ ಹಾಗೂ ಚರ್ಮದಲ್ಲಿನ ನರತುದಿಗಳಿಗೆ ಹರಡುತ್ತದೆ. ಆಗ ಗುಳ್ಳೆ ಅಥವಾ ದದ್ದುಗಳುಂಟಾಗುತ್ತವೆ. ಇದೇ ಶಿಂಗಲ್ಸ್ ರೂಪದಲ್ಲಿ ರೋಗಿಯನ್ನು ಕಾಡುವುದು.

'ಚಿಕನ್‌ಪಾಕ್ಸ್‌ನ ಮತ್ತೊಂದು ರೂಪ ಇದು ಎಂದೂ ಹೇಳಬಹುದು. ಚಿಕ್ಕಂದಿನಲ್ಲಿ ಚಿಕನ್‌ಪಾಕ್ಸ್ ಬಂದಾಗ ಆ ವೈರಸ್ ನರದೊಳಗೇ ಅವಿತು ಕೂತಿರುತ್ತದೆ. ಐವತ್ತು ದಾಟಿದ ಮೇಲೆ, ರೋಗ ನಿರೋಧಕ ಶಕ್ತಿ ಕಡಿಮೆಯಾದಾಗ, ಡಯಾಬಿಟಿಸ್ ಬಂದಿದ್ದರೆ, ಕ್ಯಾನ್ಸರ್ ಬಂದರೆ... ಇಂತಹ ಸಂದರ್ಭಗಳಲ್ಲಿ ಸುಪ್ತವಾಗಿರುವ ವೈರಸ್ ಸಕ್ರಿಯವಾಗುತ್ತದೆ. ಹೀಗಾದಾಗ ಬರುವ ರೋಗವೇ ಶಿಂಗಲ್ಸ್' ಎಂದು ಹೇಳುತ್ತಾರೆ ಬೆಂಗಳೂರಿನ ಸೇಂಟ್ ಜಾನ್ಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಎಂಡೋಕ್ರೈನಾಲಜಿಸ್ಟ್ ಆಗಿರುವ ಡಾ. ಗಣಪತಿ ಬಂಟ್ವಾಳ್.